ಸಂಗತಿ ಬೇಕಾಗಿಯೂ ಇರಲಿಲ್ಲ. ಹೇಳಿದ್ದಳು ಚಂಪಾ, "ಮತ್ತೇನಾದ್ರೂ ನೀವು ಅಲ್ಲಿಗೆ ಹೋಗು ಅಂದ್ರೆ ಬಾವಿ ಹಾರ್‍ಕಂತೀನಿ ನಾನು. ನಂಗೂ ಮಾನ, ಮರ್‍ಯಾದಿ ಇದೆ..."

ಈ ಮಾತಿಗೆ ಯಾರೂ ಪ್ರತಿಕ್ರಿಯಿಸಿರಲಿಲ್ಲ. 'ಆ ಕಾಲ ಬಂದಾಗ ನೋಡೋಣ...' ಅಂದುಕೊಂಡಿರಬೇಕು ಅಣ್ಣ.

ಅದೊಂದು ದಿನ ರಾತ್ರಿ ಹೊತ್ತು ಕಳ್ಳನಂತೆ ಬಂದು ಮನೆಬಾಗಿಲು ತಟ್ಟಿದ್ದ ಗಂಡ ಅನ್ನುವ ಪ್ರಾಣಿ. ಬಾಗಿಲು ತೆಗೆದ ಅಣ್ಣ ತೆಗೆದ ಬಾಯಿ ಮುಚ್ಚದೆ ಒಳಗಿದ್ದ ತಂಗಿಯನ್ನು ಕರೆದಿದ್ದ,

"ಚಂಪೀ, ಬಾರೇ ಇಲ್ಲಿ. ಯಾರು ಬಂದಿದಾರೆ ನೋಡು..."

ಚಂಪಾ ಹೊರಗೆ ಬಂದು ತನ್ನ ಕೈ ಹಿಡಿದವನ ಮುಖ ನೋಡಿದಳು. ಇಡೀ ಜೀವ ಹೀಕರಿಸಿದಂತಾಯ್ತು. "ಯಾಕೆ ಬಂದ್ರಿ ಇಲ್ಲಿಗೆ?" ದನಿಯಲ್ಲಿ ಕಾಠಿಣ್ಯ.

"ಥೂ ನಿನ್ನ, ಮನೆಬಾಗ್ಲಿಗೆ ಬಂದೋರಿಗೆ ಹಿಂಗಂತಾರೇನೇ? ಬನ್ನಿ ಭಾವ, ಒಳಗೆ ಬನ್ನಿ..." ಅಣ್ಣ ಆಹ್ವಾನಿಸಿದ್ದ. 'ಯಾವಾಗ ಬಂದ್ರಿ ಜೈಲಿಂದ?' ಅನ್ನುವ ಮಾತು ಗಂಟಲಲ್ಲಿ ಇದ್ದಿರಬಹುದು. ಬಾಯಿಗೆ ಬಂದಿರಲಿಲ್ಲ. ಚಂಪಾ ಸೀದಾ ಒಳಗೆ ಬಂದಿದ್ದಳು.

"ಯಾರೇ ಅದು, ತಪ್ಪಲೆ ಕೌಂಚಿ ಹಾಕಿದ ಮೇಲೆ ಬಂದಿದ್ದು?" ಹಾಲಿಗೆ ಹೆಪ್ಪು ಹಾಕುವ ಕೊನೆಯ ಕೆಲಸದಲ್ಲಿದ್ದ ಅತ್ತಿಗೆ ಕೇಳಿದ್ದಳು.

"ಹೋಗಿ ನೋಡಿ ನೀವೇ..." ಎಂದಿಲ್ಲದೆ ಅತ್ತಿಗೆಯ ಜೊತೆ ಒರಟು ಮಾತಾಡಿ, ಹೋಗಿ ನೋಡಿದ ಅತ್ತಿಗೆ ಸಡಗರದಿಂದ ಒಳಗೆ ಬಂದಿದ್ದಳು.

"ಒಂದಿಷ್ಟು ಅನ್ನ, ಕಟ್ಟುಸಾರು ಮಾಡ್ಬಿಡ್ತೀನಿ..." ಎನ್ನುತ್ತಾ ಅನ್ನದ ಚರಿಗೆ ಒಲೆಯ ಮೇಲೇರಿಸಿ, ಅಣ್ಣನಂತೆ ಅತ್ತಿಗೆಗೂ ಮುಗಿದೇ ಹೋಯಿತೆಂದುಕೊಂಡ ಸಂಬಂಧ ಮತ್ತೆ ಕೊಂಡಿ ಜೋಡಿಸಿಕೊಳ್ಳುತ್ತಿದೆಯೆಂದು ಸಂತೋಷ.

ಅವನ ಊಟವಾದ ಮೇಲೆ ಅತ್ತಿಗೆ ನಾದಿನಿಯ ಕೈಗೆ ಒಂದು ಲೋಟ ಹಾಲು ಹಿಡಿಸಿದ್ದಳು.

"ಜಾಸ್ತಿ ತಲೆಹರಟೆ ಮಾಡ್ಬೇಡ. ಮನುಷ್ರು ಅಂದ್ಮೇಲೆ ಏನೋ ಒಂದು ತಪ್ಪು ಆಗಿ ಹೋಗುತ್ತಪ್ಪಾ. ಅದನ್ನೇ ಜಗೀತಾ ಕೂತ್ಗಂಡ್ರೆ ಬದುಕು ಮಾಡೋಕಾಗುತ್ತೇನೇ? ಹೋಗು, ಅವನಿಗೆ ಸಮಾಧಾನ ಹೇಳು. ಹೆಂಡತಿಯಾದೋಳ ಕರ್ತವ್ಯ ಅದು..."

ಹಳೆಗಾಲದ ಪತಿವ್ರತೆಯಾಗಲಿಲ್ಲ ಚಂಪಾ. ಏಕಾಂತದಲ್ಲಿ ಅವನ ಮುಖದ ನೀರಿಳಿಸಿದ್ದಳು,

"ಗೊತ್ತಿಲ್ದೆ ತಪ್ಪಾಗಿದ್ರೆ ಕ್ಷಮಿಸ್ಬೋದು. ಗೊತ್ತಿದ್ದೂ ತಪ್ಪು ಮಾಡ್ದೋರಿಗೆ ನನ್ನ ಮನಸ್ಸಲ್ಲಿ ಎಳ್ಳುಕಾಳು, ಮುಳ್ಳುಮೊನೆಯಷ್ಟೂ ಜಾಗ ಉಳ್ಕೊಂಡಿಲ್ಲ. ಯಾವತ್ತೋ ನಿಮ್ಮನ್ನ ಮರೆತು ಬಿಟ್ಟಿದೀನಿ. ನಿಮಗೆ ಮಾನ, ಮರ್‍ಯಾದೆ ಅನ್ನೋದು ಚೂರಾದ್ರೂ ಇದ್ದಿದ್ರೆ ಈ ಮನೆ ಹೊಸಿಲು ದಾಟೋ ಧೈರ್ಯ ಇರ್ತಿರ್‍ಲಿಲ್ಲ..."

"ತಪ್ಪಾಯ್ತು ಕಣೇ... ತಪ್ಪಾಯ್ತು ಕಣೇ... ಇನ್ನು ಯಾವತ್ತೂ ಇಂತಾ ಹೇಲು ತಿನ್ನೋ ಕೆಲಸ ಮಾಡಲ್ಲ..." ಕುಂಯ್ಗುಟ್ಟಿದ್ದ ಅವನು. ಕಾಲಿಗೆ ಬೀಳಲು ಬಂದಿದ್ದ. ಚಂಪಾ ವಜ್ರದಷ್ಟು ಕಠಿಣವಾಗಿಬಿಟ್ಟಿದ್ದಳು. ಯಾವತ್ತಿಗೂ ಕೂಡಿಕೊಳ್ಳಲಾಗದಷ್ಟು ಮನಸ್ಸು ಮುರಿದು ಹೋಗಿಬಿಟ್ಟಿತ್ತು. ಅವನು ಅಂಗಲಾಚುವಷ್ಟು ಅಂಗಲಾಚಿದ. ಇವಳು ಕೆಪ್ಪಾದಳು. ಮೈ ಬಳಸಿ ಓಲೈಸಲು ಬಂದವನನ್ನು ದೂರ ದೂಡಿದಳು. ಒಂದಷ್ಟು ಹೊತ್ತು ಮಂಚದ ಮೇಲೆ ಹಾವು ಬಡಿದಂತೆ ಕೂತಿದ್ದವನು ಬಾಗಿಲು ತೆಗೆದುಕೊಂಡು ಆಚೆಗೆ ಹೋದ. ಒಳಮನೆಗೆ ಸಂಬಂಧವಿಲ್ಲದೆ ಹೊರಜಗುಲಿಯ ಒಂದು ತುದಿಯಲ್ಲಿದ್ದ ಕೋಣೆ. ಅವನು ಹೋಗಿದ್ದು ಒಳಗೆ ಮಲಗಿದ್ದವರಿಗೆ ಗೊತ್ತಾಗಿರಲಿಕ್ಕಿಲ್ಲ. ಅಲ್ಲಲ್ಲ, ಗೊತ್ತಾಗಿರಲಿಲ್ಲ. ಮರುದಿನ ನಸುಕಿನಲ್ಲಿ ಮನೆಗೆ ಯಾರೋ ಸುದ್ದಿ ತಲುಪಿಸಿದ್ದರು. ಉಟ್ಟ